

# ಬಂದಿ

**ಸಪ್ನಾ ಕಟ್ಟಿ**

ಕಲೆ: ಆದಿತ್ಯ ಸದಾಶಿವ್

ಅಪ್ಪ ಮಾಡಿಕೊಟ್ಟ ಸಿಹಿ ಚಹಾ ಕುಡಿದು ಕುತ್ತಿಗೆಯನ್ನು ಸೋಫಾದ ಅಂಚಿಗೆ ಒತ್ತಿಕೊಂಡು ಬಿದ್ದುಕೊಂಡ ರಮೇಶ. ನಾಲ್ಕು ಫೂಟು ಉದ್ದದ ಕಾಲುಗಳನ್ನು ಬಸ್ಸಿನ ಎರಡು ಸೀಟುಗಳ ಮಧ್ಯೆ ಮಡಚಿಕೊಂಡು ರಾತ್ರಿಯಿಡೀ ಮಾಡಿದ ಸರ್ಕಸ್ಸಿನಿಂದ ಇನ್ನೂ ನೋಯುತ್ತಿದ್ದ ಮಂಡಿಯನ್ನು ಪ್ಯಾಂಟು ಮೇಲೇರಿಸಿಕೊಂಡು ಬೆರಳುಗಳಿಂದ ನೀವಿಕೊಂಡ.

ದಶಕಗಳಿಂದ ಹೊಟ್ಟೆಯಲ್ಲಿ ಎಣ್ಣೆ ಕುದಿಸಿಕೊಂಡು ಸ್ಟೀಲೋ, ತಾಮ್ರವೋ, ಹಿತ್ತಾಳೆಯೋ ತಿಳಿಯದಂತಾಗಿದ್ದ ಪುಟ್ಟ ಗಿಂಡಿಯೊಂದನ್ನು ಇಕ್ಕಳದಲ್ಲಿ ಹಿಡಕೊಂಡು ಒಳಗಿಂದ ಬಂದ ರಾಮರಾಯರು ಅರ್ಥಾತ್ ಅವನ ತಂದೆ, “ಭರ್ರನೆ ಬಾ, ಎರಡು ಅಂಬೆ ಹಳದಿ ಬೇರು ಒಗದೇನಿ ಕೊಬ್ಬರಿಎಣ್ಣ್ಯಾಗ. ಹಚ್ಚಿ ಮಂಡಿ ತಿಕ್ಕತೇನಿ. ಮ್ಯಾಲ ಬಿಸಿಬಿಸಿ ಕಾದ ನೀರು ಹಾಕ್ಕೊಂಡಿಯೆಂದರೆ ನೋವು ಮಟಾಮಾಯ ಆಗ್ತದ” ಅಂತ ಗಡಬಡಿಸಹತ್ತಿದಾಗ ರಮೇಶನಿಗೆ ಯಾಕೋ ಸಿಟ್ಟು ಒತ್ತಿಕೊಂಡು ಬಂದು ಒದರಿದ.

“ಇರಲಿ ಬಿಡಪ್ಪಾ ಅದೇನು ಇಂದು–ನಿನ್ನೆಯದಲ್ಲ. ಹಳೇ ನೋವುಗಳು ಅಷ್ಟು ಲಗೂನ ಹೋಗಂಗಿಲ್ಲ ತಗೋ.” ಧ್ವನಿ ಅವನೆಣಿಸಿದ್ದಕ್ಕಿಂತ ಕಠೋರವಾಗಿತ್ತೇನೋ ಅವರ ಮುಖ ಮುದುಡಿತು, ಮಾತಾಡದೆ ಒಳಹೋಗಿಬಿಟ್ಟರು.

ಇವ ಪಂಚೆ ಉಡಲೂ ಬೇಸರವಾಗಿ ಪ್ಯಾಂಟು ಶರಟಲ್ಲೇ ಅಲ್ಲೇ ಸೋಫಾದಲ್ಲಿ ಮಲಗಿಕೊಂಡ. ಹಿತ್ತಲದಲ್ಲಿ ಬೆಳೆದ ಕೋತಂಬ್ರಿ ತರಲೋ, ಹೊರಗೆ ಒಣಹಾಕಿದ ಅಡುಗೆಕಟ್ಟೆ ಒರೆಸುವ ಅರಿವೆಯನ್ನು ತರಲೋ ರಾಮರಾಯರು ಹತ್ತಾರು ಬಾರಿ ಪಡಸಾಲೆಯ ಮುಖೇನ ಓಡಾಡಿದರೂ ತನ್ನತ್ತ